13523

Reg. No. | | | | | | | | |

# V Semester B.Com. Degree Examination, March - 2021

## COMMERCE

## Income Tax - I

## (CBCS Scheme)

## Paper : 5.3

**Time : 3 Hours** **Maximum Marks : 70**

***Instructions to Candidates:***

Answer should be written completely either in Kannada or in English.

## SECTION - A

## ವಿಭಾಗ – ಎ

Answer any **Five** sub questions. Each sub-question carries **Two** marks.**(5×2=10)**

ಯಾವುದಾದರೂ **ಐದು** ಉಪ ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಉಪ ಪ್ರಶ್ನೆಗೆ **ಎರಡು** ಅಂಕಗಳು.

**1.** a) Define Assessment year.

‘ತೆರಿಗೆ ವರ್ಷ’ ವ್ಯಾಖ್ಯಾನಿಸಿ.

b) Who is Resident and ordinarily resident?

ನಿವಾಸಿ ಮತ್ತು ಸಾಧಾರಣ ನಿವಾಸಿ ಎಂದರೆ ಯಾರು?

c) Who is “Specified employee”?

ನಿರ್ದಿಷ್ಟ ನೌಕರ ಎಂದರೆ ಯಾರು?

d) How is the refund from unrecognised provident fund treated under Income Tax Act?

ಆದಾಯ ತೆರಿಗೆ ಕಾಯ್ದೆ ಅಡಿಯಲ್ಲಿ ಅನುಮೋದಿಸದ ಭವಿಷ್ಯ ನಿಧಿಯಿಂದ ಮರುಪಾವತಿ ಪಡೆದ ಮೊತ್ತವನ್ನು ಹೇಗೆ ಪರಿಗಣಿಸುವಿರಿ.

[P.T.O.

e) Expand 'CBDT' and 'CIT'.

'CBDT' ಮತ್ತು 'CIT' ವಿಸ್ತರಿಸಿ.

f) Define Annual value.

'ವಾರ್ಷಿಕ ಮೌಲ್ಯ' ವ್ಯಾಖ್ಯಾನಿಸಿ.

g) What is 'Expected Rent'?

ಊಹಿಸಿದ ಬಾಡಿಗೆ ಎಂದರೇನು?

## SECTION - B

## ವಿಭಾಗ–ಬಿ

Answe any **Three** questions. Each question carries **six** marks. **(3×6=18)**

ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ **ಆರು** ಅಂಕಗಳು.

**2.** State whether the following are Agricultural or Non-Agricultural incomes.

a) Income from agricultural activities in Srilanka.

b) Income from sale of forest trees of spontaneous growth.

c) Income derived from Land used as stone quarries.

d) Sale of plants from Nursery.

e) Income derived from sale of seeds.

f) Income from poultry farming.

ಕೆಳಗಿನ ಆದಾಯವನ್ನು ವ್ಯವಸಾಯ ಮತ್ತು ವ್ಯವಸಾಯೇತರ ಆದಾಯಗಳಾಗಿ ವಿಂಗಡಿಸಿ.

a) ಶ್ರೀಲಂಕಾದಲ್ಲಿ ಕೃಷಿ ಚಟುವಟಿಕೆಗಳಿಂದ ಬಂದ ಆದಾಯ.

b) ಕಾಡಿನಲ್ಲಿ ತನ್ನಷ್ಟಕ್ಕೆ ತಾನೇ ಬೆಳೆದ ಮರಗಳಿಂದ ಬರುವ ಆದಾಯ.

c) ಕಲ್ಲಿನ ಗಣಿಗಾರಿಕೆಯಿಂದ ಬಂದ ಆದಾಯ.

d) ನರ್ಸರಿಯಲ್ಲಿ ಬೆಳೆಸಿದ ಗಿಡಗಳ ಮಾರಾಟ.

e) ಬೀಜಗಳ ಮಾರಾಟದಿಂದ ಬರುವ ಆದಾಯ.

f) ಕೋಳಿ ಸಾಕಾಣಿಕೆಯಿಂದ ಬಂದ ಆದಾಯ.

3. Sri Veeranna retired on 31-3-2020, after serving in a company for 32 years and 5 months. He received Rs.7,80,000 as gratuity. His average monthly salary in the immediately preceding 10 months was Rs.28,000. Compute his exempted and taxable gratuity for the Assessment year 2020-21. (Gratuity is not covered under Gratuity Act).

ಶ್ರೀ.ವೀರಣ್ಣನು ಒಂದು ಕಂಪನಿಯಲ್ಲಿ 32 ವರ್ಷ ಮತ್ತು 5 ತಿಂಗಳು ಸೇವೆ ಮಾಡಿ 31-03-2020 ರಂದು ನಿವೃತ್ತಿ ಹೊಂದಿರುತ್ತಾನೆ. ಆತನು ರೂ.7,80,000ಗಳನ್ನು ಗ್ರಾಚ್ಯುಟಿಯಾಗಿ ಪಡೆದಿರುತ್ತಾನೆ. ಆತನು ನಿವೃತ್ತಿಯ ಹಿಂದಿನ ತಿಂಗಳಿನ ಸರಾಸರಿ ಹತ್ತು ತಿಂಗಳ ಸಂಬಳ ರೂ.28,000. ಆತನ ಕರ ರಹಿತ ಗ್ರಾಚ್ಯುಟಿ ಹಾಗೂ ಕರಕ್ಕೆ ಒಳಪಡುವ.

ಗ್ರಾಚ್ಯುಟಿಯನ್ನು ತೆರಿಗೆ ವರ್ಷ 2020-21ಕ್ಕೆ ಕಂಡು ಹಿಡಿಯಿರಿ. [ಗ್ರಾಚ್ಯುಟಿ ನೀಡುವುದು ಗ್ರಾಚ್ಯುಟಿ ಕಾಯ್ದೆಗೆ ಒಳಪಟ್ಟಿಲ್ಲ].

4. Compute the Net annual value from the following information.

a) Municipal Rental value Rs.1,00,000

b) Fair Rental value Rs.90,000

c) Actual Rent Rs.10,000 per month

d) Unrealised Rent Rs.10,000

e) Municipal taxes paid Rs.10,000

f) Standard Rent Rs.1,10,000

ಈ ಕೆಳಗಿನ ವಿವರಗಳಿಂದ ಮನೆ ಆಸ್ತಿಯ ನಿವ್ವಳ ವಾರ್ಷಿಕ ಮೌಲ್ಯವನ್ನು ಕಂಡುಹಿಡಿಯಿರಿ.

a) ಪೌರಾಡಳಿತ ಬಾಡಿಗೆ ಮೌಲ್ಯ ರೂ.1,00,000.

b) ನಿಖರ ಬಾಡಿಗೆ ಮೌಲ್ಯ ರೂ.90,000.

c) ನೈಜ ಬಾಡಿಗೆ ತಿಂಗಳಿಗೆ ರೂ.10,000.

d) ವಸೂಲಾಗದ ಬಾಡಿಗೆ ರೂ.10,000.

e) ಪಾವತಿಸಿದ ಪುರಸಭಾ ತೆರಿಗೆಗಳು. ರೂ.10,000.

f) ಶಿಷ್ಟ ಬಾಡಿಗೆ ರೂ.1,10,000.

5. State any Six Exempted Incomes under Section - 10 of the Income Tax Act 1961.

ಸೆಕ್ಷನ್ 10 ರ ಆದಾಯ ತೆರಿಗೆ ಕಾಯ್ದೆ 1961ರ ಪ್ರಕಾರ ಯಾವುದಾದರೂ ಆರು ತೆರಿಗೆ ರಹಿತ ಆದಾಯಗಳನ್ನು ತಿಳಿಸಿ.

6. Mr. Peterson a citizen of U.K came to India for the first time on 1-5-2013. He Stayed here without any break for 3 years and left for Bangladesh on 1-5-2016. He returned to India on 1-4-2017 and went back to U.K. on 1-12-2017. He was posted back to India on 20-01-2020.

Determine his residential States for the Assessment year 2020-21.

ಶ್ರೀ.ಪೀಟರ್‌ಸನ್ ರವರು ಯು.ಕೆ.ಯ ಪ್ರಜೆಯಾಗಿದ್ದು ಇವರು ಮೊದಲ ಬಾರಿಗೆ ದಿನಾಂಕ 01–05–2013 ರಲ್ಲಿ ಭಾರತಕ್ಕೆ ಬರುತ್ತಾರೆ. ಸತತ ಮೂರು ವರ್ಷಗಳ ಕಾಲ ಇಲ್ಲೇ ಉಳಿದುಕೋಳ್ಳುತ್ತಾರೆ. ಅನಂತರ ದಿನಾಂಕ 01–05–2016ರಂದು ಬಾಂಗ್ಲಾದೇಶಕ್ಕೆ ಹೋಗುತ್ತಾರೆ. ಮತ್ತೆ 01–04–2017 ರಂದು ಭಾರತಕ್ಕೆ ಬರುತ್ತಾರೆ, ಬಂದವರು ಮತ್ತೆ 01–12–2017ರಂದು ಯು.ಕೆ.ಗೆ ವಾಪಸ್ ಹೋಗುತ್ತಾರೆ. ಇವರು ಮತ್ತೊಮ್ಮೆ 20–01–2020 ರಂದು ಭಾರತಕ್ಕೆ ಮರಳಿ ತನ್ನ ಮೂಲ ಕೆಲಸಕ್ಕೆ ಸೇರಿಕೊಂಡರು. ಕರ ವರ್ಷ 2020–21ಕ್ಕೆ ಶ್ರೀ.ಪೀಟರ್‌ಸನ್ ರವರ ನಿವಾಸಿಸ್ಥಿತಿಯನ್ನು ನಿರ್ಧರಿಸಿ.

## SECTION - C

## ವಿಭಾಗ – ಸಿ

Answer any **Three** questions. Each question carries **14** marks. **(3×14=42)**

ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ **ಹದಿನಾಲ್ಕು** ಅಂಕಗಳು.

7. Mr. Murthy furnishes the following particulars of his income for the previous year 2019-20.

a) Interest on German Development Bonds Rs.30,000 ($2/5^{th}$ is received in India).

b) Income from Agriculture in Bangladesh Rs.90,000.

c) Income from property in Srilanka received there Rs.60,000.

d) Dividend paid by an Indian company received in Canada Rs.28,000.

e) Income from Business in Kenya which is controlled from Bengaluru Rs.78,000. (Rs.18,000 received in India).

f) Past untaxed profit brought into India Rs.52,500.

g) Profit from Business in Mysore but controlled from London Rs.36,000.

h) profit on sale of Building in Mangalore but received in Dubai Rs.74,000.

i) Pension from Indian company received in London Rs.18,000.

j) Gift from a relative received in India Rs.30,000

k) Profit from business in USA controlled from India Rs.25,000.

Find out Mr. Murthy's Gross Total Income for the Assessment year 2020-21 if he is

i) Resident and ordinarily resident in the India.

ii) Resident but not ordinarily resident in India and

iii) Non-Resident in India.

ಶ್ರೀ.ಮೂರ್ತಿ ಯವರು ಆದಾಯ ವರ್ಷ 2019–20ಕ್ಕೆ ಸಂಬಂಧಿಸಿದಂತೆ ಕೆಳಕಂಡ ವಿವರಗಳನ್ನು ನೀಡಿದ್ದಾರೆ.

a) ಜರ್ಮನ್ ಡೆವಲಪ್‌ಮೆಂಟ್ ಬಾಂಡ್‌ಗಳ ಮೇಲೆ ಬಡ್ಡಿ ರೂ.30,000[$\frac{2}{5}$ರಷ್ಟನ್ನು ಭಾರತದಲ್ಲಿ ಸ್ವೀಕರಿಸಲಾಗಿದೆ].

b) ಬಾಂಗ್ಲಾದೇಶದಿಂದ ಕೃಷಿ ಆದಾಯ ರೂ.90,000.

c) ಶ್ರೀಲಂಕಾದಲ್ಲಿನ ಆಸ್ತಿಯಿಂದ ಬಂದ ಆದಾಯ ಅಲ್ಲಿಯೇ ಸ್ವೀಕರಿಸಿರುವುದು ರೂ.60,000.

d) ಭಾರತೀಯ ಕಂಪನಿಯು ಪಾವತಿಸಿದ ಲಾಭಾಂಶವನ್ನು ಕೆನಡಾದಲ್ಲಿ ಸ್ವೀಕರಿಸುವುದು ರೂ.28,000.

e) ಬೆಂಗಳೂರಿನಿಂದ ನಿಯಂತ್ರಿಸಲ್ಪಡುತ್ತಿರುವ ಕೀನ್ಯಾದಲ್ಲಿನ ವ್ಯಾಪಾರದಿಂದ ಬಂದ ಆದಾಯ ರೂ.78,000. [ರೂ. 18,000ಗಳನ್ನು ಭಾರತದಲ್ಲಿ ಸ್ವೀಕರಿಸಲಾಗಿದೆ.]

f) ಹಿಂದಿನ ತೆರಿಗೆ ಹಾಕಿಲ್ಲದ ಲಾಭವನ್ನು ಭಾರತಕ್ಕೆ ತರಲಾಗಿದೆ ರೂ.52,500.

g) ಲಂಡನ್‌ನಿಂದ ನಿಯಂತ್ರಿಸಲ್ಪಡುತ್ತಿರುವ ಮೈಸೂರಿನಲ್ಲಿನ ವ್ಯಾಪಾರದಿಂದ ಬಂದ ಲಾಭ ರೂ.36,000.

h) ಮಂಗಳೂರಿನ ಕಟ್ಟಡ ಮಾರಾಟದಿಂದ ಬಂದ ಲಾಭ ದುಬೈನಲ್ಲಿ ಸ್ವೀಕರಿಸಿರುವುದು ರೂ.74,000.

i) ಭಾರತೀಯ ಕಂಪನಿಯಿಂದ ಲಂಡನ್‌ನಲ್ಲಿ ಸ್ವೀಕರಿಸಿದ ಪಿಂಚಣಿ ರೂ.18,000.

j) ಸಂಬಂಧಿಕರೊಬ್ಬರಿಂದ ಭಾರತದಲ್ಲಿ ಸ್ವೀಕರಿಸಿದ ಉಡುಗೊರೆ ರೂ.30,000.

k) USA ವ್ಯಾಪಾರದಿಂದ ಬಂದ ಲಾಭ ರೂ.25,000ಗಳು. ಆದರೆ ವ್ಯಾಪಾರವು ಭಾರತದಿಂದ ನಿಯಂತ್ರಿಸಲ್ಪಡುತ್ತದೆ.

ಕರ ವರ್ಷ 2020–21 ಕ್ಕೆ ಶ್ರೀ.ಮೂರ್ತಿ ರವರ ಸ್ಥೂಲ ಒಟ್ಟು ಆದಾಯವನ್ನು ಭಾರತದಲ್ಲಿ

i) ನಿವಾಸಿ ಮತ್ತು ಸಾಧಾರಣ ನಿವಾಸಿಯಾಗಿದ್ದಾಗ.

ii) ಸಾಧಾರಣವಾಗಿ ನಿವಾಸಿಯಲ್ಲದಿರುವಾಗ ಹಾಗೂ

iii) ಅನಿವಾಸಿಯಾಗಿರುವಾಗ ಕಂಡು ಹಿಡಿಯಿರಿ.

8. Smt. Keerthi an employee of RK Ltd. Delhi receives the following incomes during the year ending 31-3-2020.

a) Basic Salary upto 31-08-2019 Rs.6,000 per month and there after at Rs.6,500 per month.

b) Leave travel concession Rs.4,500 (entire amount spent).

c) Dearness Allowance Rs.4,500 per month ($\frac{2}{3}^{rd}$ enters for retirement benefits).

d) Children Education Allowance Rs.250 per month for one child.

e) Reimbursement of medical expenses Rs.30,000 (Private Hospital).

f) Facility of watchman and cook is provided by the company. Each of whom is paid a salary of Rs.700 per month.

g) Interest free loan for purchasing home appliances Rs.60,000 is provided by the co. on 1-4-2019 (SBI lending rate for similar loan on 1-4-2019 is 10% p.a).

h) Smt. Keerthi has been provided with rent free flat at Delhi (rent paid by the company Rs.40,000 per annum).

i) Smt. Keerthi paid professional tax Rs.200 per month. Compute Smt. Keerthi's Salary income for the Assessment year 2020-21.

ಶ್ರೀಮತಿ ಕೀರ್ತಿ, RK Ltd, ದೆಹಲಿಯ ಉದ್ಯೋಗಿ. ಕೆಳಕಂಡ ಆದಾಯವನ್ನು ದಿನಾಂಕ 31–03–2020ಕ್ಕೆ ಕೊನೆಗೊಂಡ ವರ್ಷದಲ್ಲಿ ಸ್ವೀಕರಿಸಿದ್ದಾರೆ.

a) ಮೂಲ ವೇತನ 31–08–2019ರ ವರೆಗೆ ಮಾಸಿಕ ರೂ.6,000 ಮತ್ತು ತದನಂತರ ಮಾಸಿಕ ರೂ.6,500.

b) ರಜೆ ಪ್ರಯಾಣ ರಿಯಾಯಿತಿ ರೂ.4,500 [ಸಂಪೂರ್ಣ ಮೊತ್ತವು ಖರ್ಚಾಗಿದೆ.]

c) ತುಟ್ಟಿ ಭತ್ಯೆ ಮಾಸಿಕ ರೂ.4,500 [$\frac{2}{3}$ರಷ್ಟು ನಿವೃತ್ತಿ ಸೌಲಭ್ಯಗಳಿಗೆ ಸೇರ್ಪಡೆಯಾಗಿರುತ್ತದೆ.]

d) ಮಕ್ಕಳ ವಿದ್ಯಾಭ್ಯಾಸ ಭತ್ಯೆ ಮಾಸಿಕ ರೂ.250 ರಂತೆ ಒಂದು ಮಗುವಿಗೆ.

e) ಆರೋಗ್ಯ ಸಂಬಂಧಿ ಖರ್ಚುಗಳಿಗಾಗಿ ಮರುಪಾವತಿಸಿಕೊಂಡ ಮೊತ್ತ ರೂ.30,000 [ಖಾಸಗಿ ಆಸ್ಪತ್ರೆ.]

f) ಕಂಪನಿಯಿಂದ ಒಬ್ಬ ವಾಚ್‌ಮ್ಯಾನ್ ಹಾಗೂ ಒಬ್ಬ ಅಡುಗೆಯವನ ಸೌಲಭ್ಯವನ್ನು ನೀಡಿದ್ದು ಪ್ರತಿಯೊಬ್ಬನಿಗೂ ಮಾಸಿಕ ರೂ.700 ವೇತನ ಪಾವತಿಸಲಾಗಿದೆ.

g) ದಿನಾಂಕ 01–04–2019ರಂದು ಕಂಪನಿಯಿಂದ ಗೃಹೋಪಕರಣಗಳ ಖರೀದಿಗಾಗಿ ಬಡ್ಡಿ ರಹಿತ ಸಾಲ ರೂ.60,000ಗಳನ್ನು ಒದಗಿಸಲಾಗಿದೆ. [ಇದೇ ರೀತಿಯ ಸಾಲಗಳಿಗೆ ದಿನಾಂಕ 01–04–2019 ರಂದು SBI ಬಡ್ಡಿದರ ವಾರ್ಷಿಕ 10%.]

h) ಶ್ರೀಮತಿ ಕೀರ್ತಿ ರವರಿಗೆ ದೆಹಲಿಯಲ್ಲಿ ಬಾಡಿಗೆ ರಹಿತ ಮನೆಯನ್ನು ಒದಗಿಸಲಾಗಿದೆ. [ಸಂಸ್ಥೆಯು ಪಾವತಿಸಿದ ವಾರ್ಷಿಕ ಬಾಡಿಗೆ ರೂ.40,000.]

i) ಶ್ರೀಮತಿ ಕೀರ್ತಿರವರು ಮಾಸಿಕ ರೂ.200 ವೃತ್ತಿ ತೆರಿಗೆಯನ್ನು ಪಾವತಿಸಿದ್ದಾರೆ.

ಕರ ವರ್ಷ 2020–21 ಕ್ಕೆ ಶ್ರೀಮತಿ. ಕೀರ್ತಿರವರ ವೇತನ ಆದಾಯವನ್ನು ಕಂಡುಹಿಡಿಯಿರಿ.

**9.** Arthi own three houses in Bengaluru. The municipal valuations of which are Rs.44,000, 72,000 and 62,000 respectively. The following are further details about three houses.

a) The first house built in 2012 has been letout on a monthly rent of Rs.7,000. The expenses in connection with this house are land revenue Rs.200. Fire insurance premium Rs.1,600. Interest on loan for construction of the house Rs.8,000. Municipal taxes Rs.3,000. The house remained vacant for two months. Unrealised rent of the current year amounts Rs.14,000. The assessing officer has been satisfied about this unrealised rent.

b) The second house was built in 1996 and it is used for owner's residential purposes. In connection with this house Rs.1,600 was spent on repairs, Rs.400 was paid as fire insurance premium. The interest on load paid was Rs.16,000.

c) The construction of third house was completed on 30th June 2014 and it was letout for residential purposes on a rent of Rs.5,000 per month. Municipal tax Rs.6,200 and interest on loan Rs.32000 were paid during the year 2019-20.

Compute her income from house property for the Assessment year 2020-21.

**[P.T.O.**

ಆರ್ತಿ ಬೆಂಗಳೂರಿನಲ್ಲಿ ಮೂರು ಮನೆಗಳನ್ನು ಹೊಂದಿದ್ದಾಳೆ. ಅವುಗಳ ಪುರಸಭಾ ಮೌಲ್ಯ ಕ್ರಮವಾಗಿ ಈ ರೀತಿ ಇವೆ. ರೂ.44,000, ರೂ.72,000 ಮತ್ತು ರೂ.62,000. ಆ ಮನೆಗಳ ಇತರೆ ಮಾಹಿತಿ ಈ ಕೆಳಗಿನಂತಿವೆ.

a) ಮೊದಲನೆ ಮನೆಯು ಕಟ್ಟಿದ್ದು 2012ನೇ ಇಸವಿಯಲ್ಲಿ ಇದನ್ನು ತಿಂಗಳಿಗೆ ರೂ.7,000 ಬಾಡಿಗೆಗೆ ನೀಡಿದ್ದು ಇತರೆ ಖರ್ಚುಗಳು ಈ ರೀತಿ ಇದೆ. ನೆಲ ಬಾಡಿಗೆ ರೂ.200, ಅಗ್ನಿ ವಿಮೆ ರೂ.1,600, ಮನೆ ಸಾಲದ ಮೇಲಿನ ಬಡ್ಡಿ ರೂ.8,000, ಪುರಸಭಾ ತೆರಿಗೆ ರೂ.3,000. ಮನೆಯು ಎರಡು ತಿಂಗಳು ಖಾಲಿ ಇದೆ. ಬಾಕಿ ಇರುವ ಬಾಡಿಗೆ ಹಣ ರೂ.14,000. ತೆರಿಗೆ ಅಧಿಕಾರಿಯು ಈ ಹಣದ ಬಗ್ಗೆ ಆಕ್ಷೇಪಣೆ ಹೊಂದಿಲ್ಲ.

b) ಎರಡನೆ ಮನೆಯನ್ನು 1996 ರಂದು ಪೂರ್ಣಗೊಳಿಸಿದ್ದು ಇದನ್ನು ಸ್ವಂತ ವಾಸಕ್ಕೆ ಬಳಸಲಾಗಿದ್ದು ಈ ಮನೆಗೆ ಸಂಬಂಧಿಸಿದ ವಿವರ ಈ ರೀತಿ ಇದೆ. ರಿಪೇರಿಗಾಗಿ ರೂ.1,600, ರೂ.400 ಅಗ್ನಿ ವಿಮೆಯ ಪ್ರೀಮಿಯಂ ಆಗಿರುತ್ತದೆ. ಮನೆಯ ಸಾಲದ ಮೇಲೆ ಬಡ್ಡಿ ರೂ.16,000 ನೀಡಿರುತ್ತಾಳೆ.

c) ಮೂರನೆ ಮನೆಯನ್ನು 30 ಜೂನ್ 2014 ರಂದು ಪೂರ್ಣಗೊಳಿಸಿ ಇದನ್ನು ವಾಸಕ್ಕಾಗಿ ಬಾಡಿಗೆಗೆ ನೀಡಿದರು. ತಿಂಗಳ ಬಾಡಿಗೆ ರೂ.5,000 ರಂತೆ, ಪುರಸಭಾ ತೆರಿಗೆ ರೂ.6,200 ಮತ್ತು ಸಾಲದ ಮೇಲಿನ ಬಡ್ಡಿ ರೂ.32,000 ಆದಾಯ ವರ್ಷ 2019–20ರಲ್ಲಿ ನೀಡಿರುತ್ತಾರೆ.

ಅವಳ ಮನೆಗಳಿಂದ ಬಂದ ಆದಾಯವನ್ನು ಕರ ವರ್ಷ 2020–21ಕ್ಕೆ ಕಂಡು ಹಿಡಿಯಿರಿ.

**10.** Smt. Bharathi an employee of NSK Ltd, Bengaluru. Particulars of her income for the previous year 2019-20 are as follows.

a) Basic Salary Rs.20,000 per month.

b) DA - 20% of Basic Salary.

c) HRA Rs.4,000 per month (Rent paid Rs.5,000 per month).

d) Helper allowance Rs.300 per month (Actual amount spent Rs.200 per month).

e) Bonus Rs.25,000.

f) Leave encashment Rs.13,500

g) Advance salary of April 2020 Rs.14,000.

h) Entertainment Allowance Rs.250 per month.

i) Smt. Bharathi has been provided with free use of small car for both official and personal use.

j) Her contribution to RPF - 14% of Salary, co also makes a matching contribution.

k) Interest credited to RPF @12% Rs.18,000, on the accumulated balance of the fund.

Compute Smt. Bharathi's salary income for the Assessment year 2020-21.

ಶ್ರೀಮತಿ ಭಾರತಿ ಎಂಬುವವರು ಬೆಂಗಳೂರಿನ NSK Ltd, ಸಂಸ್ಥೆಯ ಉದ್ಯೋಗಿಯಾಗಿದ್ದಾರೆ. ಆದಾಯ ವರ್ಷ 2019-20ಕ್ಕೆ ಸಂಬಂಧಿಸಿದಂತೆ ಅವರ ಆದಾಯ ವಿವರಗಳು ಕೆಳಕಂಡಂತೆ ಇವೆ.

a) ಮೂಲ ವೇತನ ಮಾಸಿಕ ರೂ.20,000.

b) ತುಟ್ಟಿ ಭತ್ಯೆ ಮೂಲವೇತನದ 20% ರಷ್ಟು.

c) ಮನೆ ಬಾಡಿಗೆ ಭತ್ಯೆ ಮಾಸಿಕ ರೂ.4,000.

[ಬಾಡಿಗೆ ಪಾವತಿಸಿರುವುದು ಮಾಸಿಕ ರೂ. 5,000.]

d) ಸಹಾಯಕನ ಭತ್ಯೆ ಮಾಸಿಕ ರೂ.300.

[ಖರ್ಚು ಮಾಡಿದ ಮೊತ್ತ ಮಾಸಿಕ ರೂ. 200.]

e) ಬೋನಸ್ ರೂ.25,000.

f) ಗಳಿಕೆ ರಜೆ ನಗದೀಕರಣ ರೂ.13,500.

g) ಏಪ್ರಿಲ್ 2020ರ ಮುಂಗಡ ವೇತನ ರೂ.14,000.

h) ಮನರಂಜನಾ ಭತ್ಯೆ ಮಾಸಿಕ ರೂ. 250

i) ಶ್ರೀಮತಿ ಭಾರತಿ ರವರ ಕಛೇರಿ ಹಾಗೂ ವೈಯಕ್ತಿಕ ಕೆಲಸಗಳಿಗಾಗಿ ಒಂದು ಚಿಕ್ಕ ಕಾರನ್ನು ಒದಗಿಸಲಾಗಿದೆ.

j) RPF ಗೆ ಆಕೆಯ ವೇತನದ 14% ಅನ್ನು ದೇಣಿಗೆಯಾಗಿ ನೀಡುತ್ತಿದ್ದು ಸಂಸ್ಥೆಯು ಅದೇ ಮೊತ್ತವನ್ನು ಪಾವತಿಸುತ್ತಿದೆ.

k) RPF ನ ಒಟ್ಟು ಗೂಳಿಸಿದ ಮೊತ್ತದ ಮೇಲೆ ಸಂಸ್ಥೆಯು 12% ನಂತೆ ಜಮೆ ಮಾಡಿದ ಬಡ್ಡಿಯು ರೂ.18,000 ಆಗಿದೆ.

ಕರ ವರ್ಷ 2020-21ಕ್ಕೆ ಶ್ರೀಮತಿ ಭಾರತಿ ರವರ ವೇತನದ ಆದಾಯವನ್ನು ಕಂಡುಹಿಡಿಯಿರಿ.

11. Smt. Pranathi is the owner of three houses. The following are the particulars related to the three houses.

| Particulars<br><br>Use of House | House-I<br>Rs.<br>Let out | House-II<br>Rs.<br>Let out | House-III<br>Rs.<br>SOP |
|---|---|---|---|
| Standard Rent | 3,00,000 | 4,00,000 | - |
| Municipal Value | 2,00,000 | 6,00,000 | 6,00,000 |
| Fair rental value | 3,60,000 | 3,60,000 | 7,00,000 |
| Actual Rent per month | 30,000 | 40,000 | - |
| Municipal Taxpaid | 10% of M.V | 10% of M.V | 10% of M.V |
| Repaircharges | - | - | 4,000 |

Smt. Pranathi borrows Rs.6,00,000 at 10% per annum from the bank for construction of House - III. Construction completed 31-05-2018. Date of borrowing loan 1-4-2017.

Determine the income from house property of Smt. Pranathi for the Assessment year 2020-21.

ಶ್ರೀಮತಿ ಪ್ರಣತಿ ರವರು ಮೂರು ಮನೆಗಳ ಮಾಲೀಕತ್ವ ಹೊಂದಿದ್ದಾರೆ. ಈ ಮೂರು ಮನೆಗಳಿಗೆ ಸಂಬಂಧಪಟ್ಟಂತೆ ವಿವರಗಳು ಈ ರೀತಿ ಇವೆ.

| ವಿವರಗಳು<br><br>ಮನೆಯ ಉಪಯೋಗ | ಮನೆ – I<br>[ರೂ.]<br>ಬಾಡಿಗೆಗೆ ನೀಡಿದ್ದು | ಮನೆ – II<br>[ರೂ.]<br>ಬಾಡಿಗೆಗೆ ನೀಡಿದ್ದು | ಮನೆ – III<br>[ರೂ.]<br>ಸ್ವಂತ ವಾಸಕ್ಕೆ |
|---|---|---|---|
| ಪ್ರಮಾಣಿತ ಬಾಡಿಗೆ | 3,00,000 | 4,00,000 | – |
| ಪುರಸಭೆ ಮೌಲ್ಯ | 2,00,000 | 6,00,000 | 6,00,000 |
| ನ್ಯಾಯೋಚಿತ ಮೌಲ್ಯ | 3,60,000 | 3,60,000 | 7,00,000 |

| | | | |
|---|---|---|---|
| ನೈಜ ಬಾಡಿಗೆ ಪ್ರತೀ ತಿಂಗಳಿಗೆ | 30,000 | 40,000 | – |
| ಪುರಸಭೆ ತೆರಿಗೆ ಕಟ್ಟಿದ್ದು | ಪುರಸಭೆ ಮೌಲ್ಯದ ಶೇಕಡಾ10% ರಷ್ಟು. | ಪುರಸಭೆ ಮೌಲ್ಯದ ಶೇಕಡಾ10% ರಷ್ಟು. | ಪುರಸಭೆ ಮೌಲ್ಯದ ಶೇಕಡಾ10% ರಷ್ಟು. |
| ರಿಪೇರಿ ಖರ್ಚು | – | – | 4,000 |

ಶ್ರೀಮತಿ ಪ್ರಣತಿ ರವರು ಬ್ಯಾಂಕಿನಿಂದ ಮೂರನೇ ಮನೆಯನ್ನು ಕಟ್ಟಲು ಶೇಕಡಾ 10 ರಂತೆ [ವಾರ್ಷಿಕ] ರೂ.6,00,000 ಮನೆ ಸಾಲವನ್ನು ತೆಗೆದುಕೊಂಡಿರುತ್ತಾರೆ. 31–05–2018 ರಂದು ಮನೆ ಕಟ್ಟಡದ ನಿರ್ಮಾಣ ಪೂರ್ಣಗೊಂಡಿದೆ. ಸಾಲವನ್ನು ಪಡೆದ ದಿನಾಂಕ 01–04–2017.

ಶ್ರೀಮತಿ ಪ್ರಣತಿ ರವರ ಮನೆ ಆಸ್ತಿಯ ಆದಾಯವನ್ನು ಕರ ವರ್ಷ 2020–21ಕ್ಕೆ ನಿಶ್ಚಯಿಸಿ.

---